2. ವಸೂಲೀ ಹಕ್ಕನ್ನು ಕೊಂಡುಕೊಳ್ಳುವ ಕಂಟ್ರಾಕ್ಟುದಾರನು ಇದಕ್ಕೆ ಲಗತ್ತಾಗಿರುವ ಷೆಡ್ಯೂಲಿನಲ್ಲಿ ನಮೂದಾಗಿರುವ ದರಗಳ ಮೇರಿಗೇನೇ ಟೋಲ್ ವಸೂಲ್ಮಾಡಬೇಕು. ಮತ್ತು ಜಾಸ್ತಿದರ ವಸೂಲ್ಮಾಡಕೂಡದು, ಸ್ಯ 1876ನೇ ಇಸವಿ ನವಂಬರ್ 4ನೇ ಮಕ್ಕಂ 276ನೇ ನಂಬರ್‌ವುಳ್ಳ ಲೇಪ್ ಚೀಫ್ ಕಮ್ಮಿಷನರ್ ಸಾಹೆಬರವರ ನೋಟಿಫಿಕೇಷನಿನಲ್ಲಿ ಫಾಯಿಷ್ ಆಗಿ ಇಗಿರುವ ರೂಲ್ಸ್ ಪ್ರಕಾರ ನಡವುಕೊಳ್ಳಬೇಕು. ಸರ್ಕಾರದ ಸ್ವತ್ತು ಮತ್ತು ಸರ್ಕಾರದ ಕೆಲಸದ ಮೇಲೆ ಸಂಚರಿಸುವ ಸರ್ಕಾರ ಉದ್ಯೋಗಸ್ಥರು ಸುದ್ದಾ ಸುಂಕದ ದೆಕೆಯಿಂದ ವಿನಾಯಿಸಲ್ಪಟ್ಟಿರುತ್ತಾರೆ.

3. ಚಡದರಖಾಸ್ತನ್ನಾಗಲಿ ಯಾವ ದರಖಾಸ್ತನ್ನಾಗಲಿ ಅಂಗೀಕರಿಸುವದಕ್ಕೆ ಯಾ ತಿರಸ್ಕರಿಸುವದಕ್ಕೆ ಡೆಪ್ಯೂಟಿಕಮ್ಮಿಷನರವರು ಅಧಿಕಾರ ವುಳ್ಳವರಾಗಿರುತ್ತಾರೆ.

4. ಯಾವ ದರಖಾಸ್ತು ಅಂಗೀಕರಿಸಲ್ಪಡುತ್ತದೋ ಆವನು ಕೂಡ್ಲೆ ದರಖಾಸ್ತು ಮೊಬಲಗಿನಲ್ಲಿ ಆರರಲ್ಲಿ ಒಂದು ಭಾಗದ ಮೊಬಲಗನ್ನು ಅಡ್ವಾನ್ಸಾಗಿ ತೇವಣಿ ಯಿಟ್ಟು ಬಾಕೀ ಮೊಬಲಗನ್ನು ಸ್ಯ 1889ನೇ ಇಸವಿ ಏಪ್ರೆಲ್ 20ರ ಲಾಗಾಯತು ಸಮನಾದ 10 ಮಾಹೆವಾರಿ ಬಿಸ್ತುಗಳಾಗಿ ಪ್ರತಿ ತಿಂಗಳು 20ನೇ ತಾರೀಖಿಗೆ ಪೂರ್ವೀ ಮಾಡಬೇಕು. ಡಿವಿಜಿಟ್ ಮೊಬಲಗು 11—12ನೇ ಮಾಹೆ ಬಿಸ್ತುಗಳಿಗೆ ಉಪಯೋಗಿಸಲ್ಪಡುವದು. ದರಖಾಸ್ತುದಾರನು ಪ್ರತಿ ಮಾಹೆವಾರಿ ಬಿಸ್ತು ಮೊಬಲಗನ್ನು ತಪ್ಪದೆ ಕೊಡುತ್ತಾ ಬರುವದಕ್ಕೆ ಲಾಯಖಾದ ವೆಬ್ಬನನ್ನು ಜಾಮೀನು ಕೊಡಬೇಕು.

5. ತೇವಣಿ ಇಡದೇ ಇದ್ದರೆ ಅಥವಾ ಜಾಮೀರ್ ಕೊಡದೆ ಇದ್ದರೆ ದರಖಾಸ್ತುದಾರನಿಗೆ ನುಕ್ಸಾನುಕರವಾಗಿ ಕಂಟ್ರಾಕ್ಟು ಎರಡನೇ ಹರಾಜ್‌ಮಾಡಲ್ಪಡುವದು ಬಿಸ್ತು ಪ್ರಕಾರ ಹಣ ಕೊಡುವದಕ್ಕೆ ತಪ್ಪಿದರೆ ಹಾಗೆ ಬಾಕಿಯಾದ ಮೊಬಲಗಿಗೆ ಪೂರ್ವೀ ತಾರೀಖಿನ ವರಿಗೆ ತಿಂಗಳು ಒಂದಕ್ಕೆ ರೂಪಾಯಿ ಒಂದಕ್ಕೆ 1 ಕಾಸಿನಂತೆ ಬಡ್ಡಿ ವಸೂಲ್ಮಾಡಲ್ಪಡುವದು ಮತ್ತು ಡೆಪ್ಯೂಟಿ ಕಮ್ಮಿಷನರವರು ತಮಗೆ ಯುಕ್ತ ತೋರುವ ಪ್ರಕಾರ ಜಾಮೀರ್ದಾರನ ಅಪೇಕ್ಷೆ ಮೇರಿಗೆ ಕಂಟ್ರಾಕ್ಟು ಎರಡನೇ ಹರಾಜ್ ಮಾಡಲ್ಪಡುವದಕ್ಕೆ ಗ.ರಿಯಾಗತಕ್ಕದ್ದು. ಅದರಿಂದ ಯೇನಾದರೂ ನಷ್ಟಸಂಭವಿಸಿದರೆ ಅದು ಕಂಟ್ರಾಕ್ಟುದಾರನಿಂದ ಅಥವಾ ಜಾಮೀರ್ದಾರನಿಂದ ಕಂದಾಯದ ಬಾಕಿಯಂತೆ ವಸೂಲ್ ಮಾಡಲ್ಪಡತಕ್ಕದ್ದು.

6. ದರಖಾಸ್ತು ಮೊಬಲಗು ರಿಪಾಯಿ 4 ಮತ್ತು 5ನೇ ಕಲಂನಲ್ಲಿ ನಮೂದಾಗುವ ಪರತ್ತಿಗೆ ಒಳಪಟ್ಟು ಖಜಾನೆಗೆ ಸಲಾಯಿಸುವ ಸದರೀ ಕಂಟ್ರಾಕ್ಟು ಮೊಬಲಗಿನ ರೂಪಾಯಿ 1ಕ್ಕೆ ಒಂದಾಣೆಯಂತೆ ಲೋಕಲ್‌ಸೆಸ್ ಕೊಡಲಿಕ್ಕೆ ಕಂಟ್ರಾಕ್ಟುದಾರನು ಬದ್ಧನಾಗಿ ಇರುತ್ತಾನೆ.

7. ಪ್ರತಿ ದಿನದ ವಸೂಲಿ ತೋರಿಸುವ ಲೆಕ್ಕವನ್ನು ಇಡಲು ಕಂಟ್ರಾಕ್ಟುದಾರನು ಬದ್ಧನಾಗಿರುವದಲ್ಲದೆ ಡಿಸ್ಟ್ರಿಕ್ಟು ಮತ್ತು ತಾಲ್ಲೂಕು ಉದ್ಯೋಗಸ್ಥರ ಇನ್‌ಸ್ಪೆಕ್ಷನಿಗೆ ಸದರೀ ಲೆಕ್ಕ ವಳಗಾಗಿ ಇರತಕ್ಕದ್ದು.

8. ಫಾಟಿಯ ಟೋಲ್ ಮನೆ ಮತ್ತು ಗೇಟನ್ನು ಕಂಟ್ರಾಕ್ಟುದಾರನು ಉಪಯೋಗಿಸತಕ್ಕದ್ದು. ಮತ್ತು ಆವಿಗಳನ್ನು ಆತನು ಪೂರಾ ದುರಸ್ತಿನಲ್ಲಿ ಇಟ್ಟುಕೊಂಡಿರತಕ್ಕದ್ದು.

ದರಗಳ ಷೆಡ್ಯೂಲ್ ಪಟ್ಟಿ.

		ರೂ.	ಆ.	ಪೈ.
1.	ಪ್ರತಿ ನಾಲ್ಕು ಚಕ್ರದ ಭಂಡಿಗೆ	2	0	0
2.	ಪ್ರತಿ ಎರಡು ಡಿಟೊ	1	0	0
3.	ಪ್ರತಿ ಯಕ್ಕಾ ಮೇಲೂ	0	4	0
4.	ಸ್ಪ್ರಿಂಗ್‌ಯಾನೇ ಬಿಲ್ಲಿನ ಮೇಲೆ ಇರುವ ಬಾಡಿಗೆ ಭಂಡಿ ಪ್ರತಿ 1ಕ್ಕೆ	0	2	0
5.	ಎಂಟು ಎತ್ತುಗಳಿಂದ, ಹೋಣಗಳಿಂದ, ಕುದರೆಗಳಿಂದ, ಎಳೆಯಲ್ಪಟ್ಟು ಮತ್ತು ಬಿಲ್ಲಿನ ಮೇಲೆ ಇಲ್ಲದ ಪ್ರತಿ ಗಾಡಿ ವ ಬಾಡಿಗೆ ಭಂಡಿ ಬಂದಕ್ಕೆ ಭರ್ತಿಯಾಗಿ ಇದ್ದರೆ	1	8	0
6.	ಡಿಟೋ ಡಿಟೋ ಭರ್ತಿಯಿಲ್ಲದಿದ್ದರೆ	0	8	0
7.	ಆರುಯತ್ತುಗಳು ವಗೈರೇಗಳಿಂದ ಯಳೆಯಲ್ಪಟ್ಟು ಗಾಡಿ ವ ಬಾಡಿಗೆ ಭಂಡಿ ಒಂದಕ್ಕೆ ಭರ್ತಿಯಾಗಿದ್ದರೆ.	0	12	0
8.	ಡಿಟೋ ಡಿಟೋ ಭರ್ತಿ ಯಿಲ್ಲದಿದ್ದರೆ	0	6	0
9.	ನಾಲ್ಕು ಯತ್ತು ವಗೈರೇಗಳಿಂದ ಯಳೆಯಲ್ಪಟ್ಟ ಗಾಡಿ ಮತ್ತು ಬಾಡಿಗೆ ಭಂಡಿ ಒಂದಕ್ಕೆ ಭರ್ತಿಯಾಗಿ ಯಿದ್ದರೆ	0	8	0
10.	ಡಿಟೋ ಡಿಟೋ ಭರ್ತಿ ಯಿಲ್ಲದಿದ್ದರೆ	0	4	0
11.	ಯರಡು ಯತ್ತು ವಗೈರೇಗಳಿಂದ ಯಳೆಯಲ್ಪಟ್ಟ ಗಾಡಿ ಯಾ ಬಾಡಿಗೆ ಭಂಡಿ ಬಂದಕ್ಕೆ ಭರ್ತಿಯಾಗಿ ಇದ್ದರೆ	0	4	0
12.	ಡಿಟೋ ಡಿಟೋ ಭರ್ತೀ ಯಿಲ್ಲದಿದ್ದರೆ	0	2	0
13.	ಕೋಣಗಳು ಯಾ ಯತ್ತುಗಳು ರಾಸು 1ಕ್ಕೆ ಹೊರಿಸಲ್ಪಟ್ಟು ಯಿದ್ದರೆ. ..	0	1	0
14.	ಡಿಟೋ ಡಿಟೋ ಹೊರೆ ಯಿಲ್ಲದಿದ್ದರೆ	0	0	3
15.	ಪ್ರತಿ ಆನೆಗೂ	1	8	0
16.	ಪ್ರತಿ ವಂಟೆಗೂ ಹೊರೆ ಹೊರಿಸಲ್ಪಟ್ಟಿದ್ದರೆ	0	8	0
17.	ಡಿಟೋ ಡಿಟೋ ಹೊರೆ ಯಿಲ್ಲದಿದ್ದರೆ	0	4	0
18.	ಡಿಟೋ ಕುದರೆಗೂ ಹೊರೆ ಹೊರಿಸಲ್ಪಟ್ಟಿದ್ದರೆ ಯಾ ಸವಾರೀ ಮಾಡಲ್ಪಡುತ್ತಿದ್ದರೆ ..	0	1	6

19.	ಹೊರೆ ಯಿಲ್ಲದ ಯಾ ಹಿಡಿದುಕೊಂಡು ಹೋಗುವ ಪ್ರತಿ ಕುದರೆಗೂ	0	0	9
20.	ಪ್ರತಿ ತಟ್ಟು ಯಾ ಹೇಸರ ಕತ್ತೆಗೂ ಹೊರೆ ಹೊರಸಲ್ಪಟ್ಟಿದ್ದರೆ ಯಾ ಸವಾರಿ ಮಾಡಲ್ಪಡುತಿದ್ದರೆ	0	0	9
21.	ಡಿಟೋ ಹೊರೆ ಯಿಲ್ಲದ ಯಾ ಹಿಡಿದುಕೊಂಡು ಹೋಗಲ್ಪಡುವದಕ್ಕೆ	0	0	6
22.	ಪ್ರತಿ ಕತ್ತೆಗೂ ಹೊರೆ ಹೊರಸಲ್ಪಟ್ಟು ಯಿದ್ದರೆ ಯಾ ಸವಾರಿ ಮಾಡಲ್ಪಡುತಿದ್ದರೆ ..	0	0	6
23.	ಹೊರೆ ಯಿಲ್ಲದ ಯಾ ಹಿಡಿದುಕೊಂಡು ಹೋಗಲ್ಪಡುವ ಪ್ರತಿ ಕತ್ತೆಗೂ ..	0	0	1
24.	ಪ್ರತಿ ಕುರಿ ಮೇಕೆ ಯಾ ಹಂದಿಗೂ	0	0	1
25.	ಯೆಂಟು ಜೋಯಿಗಳೊಡನೆ ಪ್ರತಿ ಡೋಲಿ, ಪಾಲಕಿ ಯಾ ಟಾಂಜಾನಿಗೂ ..	1	0	0
26.	ಆರು ಜೋಯಿಗಳೊಡನೆ ಡಿಟೋ	0	12	0
27.	ನಾಲ್ಕು ಜೋಯಿಗಳೊಡನೆ ಡಿಟೋ	0	8	0
28.	ಯಿಬ್ಬರು ಜೋಯಿಗಳೊಡನೆ ಡಿಟೋ ಡಿಟೋ	0	4	0

ಸೂಚನೆ—ನಡೆದು ಬರುವ ಮಾರ್ಗಸ್ಥರ ಮೇಲೆ ಟೋಲ್ ವಸೂಲ್ ಮಾಡತಕ್ಕದ್ದಲ್ಲ.

ವಿ. ಪಿ. ಮಾಧವರಾವ್,
ಡೆಪ್ಯುಟಿ ಕಮ್ಮಿಷನರ್.

ನಗರದ ಡಿವೀಜ್ಯ ಡಿಸ್ಟ್ರಿಕ್ಟ್ ಜಡ್ಜಿಯರವರ ಕೋರ್ಟಿನಲ್ಲಿ.

1889ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ್ 8.

ಮೃತಪಟ್ಟ ಚನ್ನಬಸಪ್ಪನ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಚನ್ನಬಸಯ್ಯ ಯಾನೆ ಭದ್ರಯ್ಯನ ವೀರಭದ್ರಯ್ಯನು, ಮೃತಪಟ್ಟಸದರೀ ಚನ್ನಬಸಪ್ಪನಿಗೆ ಮೈನರ್ ಮಗನು ಆಗಬೇಕೆಂಬ ಹಕ್ಕುದಾರೀ ಮೇಲೆ ನಾಗರ ತಾಲ್ಲೂಕು ಬದರವಳ್ಳಿ ಸ್ಥಳದ ವೀರಭದ್ರಯ್ಯನು ಬದರವಳ್ಳಿ, ವಾಸಸ್ಥರಾಗಿ ಮೃತಪಟ್ಟ ಚನ್ನಬಸಪ್ಪನ ಜೀಂದಗಿ ಬಗ್ಯಾಗಿ ಬರತಕ್ಕ 800 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ವೀರಭದ್ರಯ್ಯನ ಅರ್ಜೀಯನ್ನು 1889ನೇ ಇಸವಿ ಫಿಬ್ರವರಿ ತಿಂಗಳು ತಾರೀಖು 23ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಕೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಚನ್ನಬಸಪ್ಪನ ಆಸ್ತಿಗೆ ಹಕ್ಕುದಾರರಾದ ವಿನಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಯಿದೆ.

1889ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ್ 10.

ಮೃತಪಟ್ಟ ದಾಸಪ್ಪನ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಮೈನರ್ ಪರಮೇಶ್ವರಯ್ಯನ ಗಾರ್ಡಿಯ್ಯ ಮಹಾಬಲಭಟ್ಟನು ಮೃತಪಟ್ಟ ಸದರೀ ದಾಸಪ್ಪನಿಗೆ ಮೈನರ್ ದತ್ತು ತಂಮ್ಮನು ಆಗಬೇಕೆಂಬ ಹಕ್ಕುದಾರೀ ಮೇಲೆ ಮಳಗೆ ಸ್ಥಳದ ಮಹಾಬಲಭಟ್ಟನು ಮೆಳಗೆ ವಾಸಸ್ಥನಾಗಿ ಮೃತಪಟ್ಟ ದಾಸಪ್ಪನ ಜೀಂದಗೀ ಬಗ್ಯಾಗಿ ಬರತಕ್ಕ 2000 ರೂಪಾಯಿ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಮಹಾಬಲಭಟ್ಟನ ಅರ್ಜಿಯನ್ನು 1889ನೇ ಇಸವಿ ಫಿಬ್ರವರಿ ತಿಂಗಳು ತಾರೀಖು 23ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಕೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ದಾಸಪ್ಪನ ಆಸ್ತಿಗೆ ಹಕ್ಕುದಾರರಾದ ವಿನಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1889ನೇ ಇಸವಿ ಜನವರಿ ತಿಂಗಳು 30ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಿಃ ನಮ್ಮ ದಸ್ತಖತ್ತೊಡನೆ ಕೊಡೋಣವಾಗಿದೆ.

ಟಿ. ನರಹರಿರಾವ್, ಸೆರ್ಷ ಜಡ್ಜ.

ಗವರ್ಮೆಂಟ್ ತಯಾರೀ ಬಾಬತು ಸಿಂಕೋನಾ ಫೆಬ್ರಿಫ್ಯೂಜ್ ಎಂಬ ಔಷಧ.

ಕ್ವಿನೈನ್ ಔಷಧವು, ಕ್ವಿನ್ಯೆಗೆ ಬದಲಾಗಿ ಉಪಯೋಗಿಸತಕ್ಕ ಬಹಳ ಯೋಗ್ಯವಾದ ಔಷಧವಾಗಿರುತ್ತೆ. ಜನಗಳಿಗಾಗಿ ವ ಧರ್ಮಾರ್ಥವಾಗಿ ಗವರ್ಮೆಂಟ್ಟಿನ್ಟ್ಟಿಟ್ಟೀಸರಿಗಳು ಕೊಂಡು ಕೊಳ್ಳಬಹುದು, ಬಂದು ನಲಕ್ಕೆ ಇಪ್ಪತ್ತು ಪಾರ್ಟಗಳು ತೆಗದುಕೊಳ್ಳುವ ಯಾವ ಮನುಷ್ಯನಾದರೂ ಕಲ್ಕತ್ತೆಯಲ್ಲಿ ಬೊಟಾನಿಕಲ್ ಗಾರ್ಡನ್ ಸೂಪರ್ಟಿಂಡೆಂಟರ ದೆಕೆಯಿಂದ ಇವರಡಿ ಕಂಡ ದರಗಳ ಪ್ರಕಾರ ನಗದು ಕೊಟ್ಟೀ ಕೊಂಡುಕೊಳ್ಳಬಲ್ಲವನಾಗಿರುತ್ತೆ. ನಾಲ್ಕು ಔನ್ಸ್ ಔಷಧವುಳ್ಳ ತಗರದ ಡಬ್ಬೀ ಬಂದಕ್ಕೆ ರೂ. 4—8—0; ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ. 8—8—0; ಒಂದು ಪೌಂಡ್ ಔಷಧವುಳ್ಳ ಡಬ್ಬಿಗೆ ರೂ. 16—8—0; ಬೊಟಾನಿಕಲ್ ಗಾರ್ಡನ್ ಸೂಪರ್ಟಿಂಡೆಂಟರು ಇದರಿಂದ ಕಂಡ ದರ ಪ್ರಕಾರ ನಗದಿಗೇನೇ ಸರ್ವಜನಗಳಿಗೂ ಬದಗಿಸ ಬಹುದು; ನಾಲ್ಕು ಔನ್ಸ್‌ವುಳ್ಳ ಡಬ್ಬಿಬಂದಕ್ಕೆ ರೂ. 5—8—0, ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ. 10—8—0, ಒಂದು ಪೌಂವುಳ್ಳ ಡಬ್ಬಿಗೆ 20 ರೂಪಾಯಿ, ಈ ಔಷಧವು ಕಲ್ಕತ್ತೆಯಲ್ಲಿ ಮುಖ್ಯ ಮುಖ್ಯ ಯೂರೋಪಿಯರ್ಯನ್ಸ್‌ಟೇವ್ ಮದ್ದಿನಂಗಡಿಯವರಿಂದ ಮಾರಲ್ಪಡುತ್ತೆ. ಸದರೀ ಕಿಮ್ಮತಿನೊಂದಿಗೆ ದರ 4 ವ 8 ಔನ್ಸ್ ತಗರದ ಡಬ್ಬಿಗೆ ಎಂಟು ಆಣ್ಣೆಟಸ್ಟಾಲ್ ಹಾಸಲು, ಒಂದು ಪೌಂ ಡಬ್ಬಿಗೆ ಹನ್ನೆರಡು ಆಣೆ ಹಾಸಲೂ ಕೊಡಬೇಕು.

10